



ಅರುಣ ಪಿ. ಭಟ್ಟ


## ವಾರಭವಿಷ್ಯ: 29.05.2025ರಿಂದ 04.06.2025ರವರೆಗೆ




ವಾರದ ಆರಂಭದಲ್ಲಿ ವೃತ್ತಿ ಜೀವನದಲ್ಲಿ ಕೀರ್ತಿ ಲಭಿಸುತ್ತದೆ. ಇನ್ನು ಉದ್ಯೋಗಸ್ಥರಿಗೆ ಜವಾಬ್ದಾರಿ ಹೆಚ್ಚಾಗಲಿದೆ. ವೈಯಕ್ತಿಕ ಜೀವನದಲ್ಲೂ ಉತ್ತಮವಾದ ಸಮಯವಿದು. ವಿದ್ಯಾರ್ಥಿಗಳು ಹೆಚ್ಚು ಜಾಗರೂಕರಾಗಿ ಇರಬೇಕು. ಗುರಿ ಬೇರೆಡೆ ಹೋಗದಂತೆ ನೋಡಿಕೊಂಡರೆ ಮಾತ್ರ ಉತ್ತಮ ಫಲಿತಾಂಶ ನಿರೀಕ್ಷೆ ಮಾಡಲು ಸಾಧ್ಯ. ಖರ್ಚಿನ ಪ್ರಮಾಣ ಹೆಚ್ಚಾಗುತ್ತದೆ. ಶುಭದಿನ: 30. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವಾರದ ಆರಂಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಕಡೆಗೆ ಗಮನ ಹೆಚ್ಚಿರುತ್ತದೆ. ತೀರ್ಥಕ್ಷೇತ್ರ ಪ್ರವಾಸ ಮಾಡಬೇಕು. ಹಿರಿಯರ ಸೇವೆ ಮಾಡಲು ಅವಕಾಶ ದೊರೆಯಲಿದೆ. ಉನ್ನತ ಶಿಕ್ಷಣ ಮಾಡುತ್ತಿರುವವರಿಗೆ ಉತ್ತಮ ಪ್ರಗತಿ ಇದೆ. ಮಾಮೂಲಿ ಕೆಲಸಗಳ ಹೊರತಾಗಿ ಇತರ ವಿಚಾರಗಳ ಕಡೆಗೆ ಗಮನ ಹೋಗುತ್ತದೆ. ವ್ಯವಹಾರದಲ್ಲಿ ಚೆನ್ನಾಗಿ ಲಾಭವಾಗುತ್ತದೆ. ಶುಭದಿನ: 01. ಸೌಂದರ್ಯ ಲಹರಿ ಪಠಿಸಿರಿ.





ಕೌಟುಂಬಿಕ ವಿಚಾರದಲ್ಲಿ ಕೆಲವು ಕಷ್ಟಗಳು ಎದುರಾಗಲಿವೆ. ನಿಮ್ಮ ಪ್ರಯತ್ನ ಭವಿಷ್ಯದ ಯಶಸ್ಸಿಗೆ ಸಹಕಾರಿ ಆಗಿರುತ್ತದೆ. ಸಂಗಾತಿ ಜೊತೆ ನಡೆಸುವ ಮಾತುಕತೆ ಉದ್ವಿಗ್ನಕ್ಕೆ ಕಾರಣವಾಗಬಹುದು. ಉದ್ಯೋಗ ಸ್ಥಳದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಇದೇ ಅವಧಿಯಲ್ಲಿ ದೂರ ಪ್ರಯಾಣ ಮಾಡುವ ಸಾಧ್ಯತೆ ಇದೆ. ಶುಭದಿನ: 02. ಹನುಮಾನ್ ಚಾಲಿಸ್ ಓದಿರಿ.





ವಾರದ ಆರಂಭದಲ್ಲಿ ವೈವಾಹಿಕ ಜೀವನದಲ್ಲಿ ಸಂತಸ ಇರುತ್ತದೆ. ಸಂಗಾತಿ ಜೊತೆ ಉತ್ತಮ ಬಾಂಧವ್ಯ ಇರಲಿದೆ. ಆತ್ಮವಿಶ್ವಾಸ ಹೆಚ್ಚಾಗಲಿದೆ. ಸನ್ಮಾನಗಳು ಆಗುವ ಸಾಧ್ಯತೆಗಳಿವೆ. ವಾರದ ಅಂತ್ಯಕ್ಕೆ ಕುಟುಂಬ ಸದಸ್ಯರ ನಡವಳಿಕೆಯಿಂದ ಗೊಂದಲಕ್ಕೆ ಸಿಲುಕಿಕೊಳ್ಳುತ್ತೀರಿ. ಇನ್ನು ಆರೋಗ್ಯದಲ್ಲಿ ಕೂಡ ಏರಿಳಿತಗಳು ಕಾಣಿಸಿಕೊಳ್ಳುತ್ತವೆ. ಶುಭದಿನ: 03. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ಉದ್ಯೋಗ ನಿಮಿತ್ತವಾಗಿ ಈ ಅವಧಿಯಲ್ಲಿ ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಸೃಷ್ಟಿಯಾಗಬಹುದು. ಆದ್ಯತೆ ಮೇಲೆ ಕೆಲಸ ಕಾರ್ಯಗಳನ್ನು ಪೂರೈಸುವುದಕ್ಕೆ ನಿರ್ಧಾರ ಮಾಡುತ್ತೀರಿ. ಈ ತೀರ್ಮಾನದಿಂದ ಭವಿಷ್ಯದಲ್ಲಿ ಅನುಕೂಲವಾಗಲಿದೆ. ಆಹಾರ ನೀರು ಸೇವನೆ ಬಗ್ಗೆ ಹೆಚ್ಚು ಲಕ್ಷ್ಯ ಇರಲಿ. ಶುಭದಿನ: 01. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.





ಮಕ್ಕಳ ಪ್ರಗತಿಯಿಂದ ಸಂತಸ, ಹೆಮ್ಮೆ ಉಂಟಾಗುತ್ತದೆ. ಭವಿಷ್ಯದ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಯಶಸ್ಸು ದೊರೆಯಲಿದೆ. ಆದಾಯ ಅತ್ಯುತ್ತಮವಾಗಿ ಇರುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜೊತೆ ಬಾಂಧವ್ಯ ಗಟ್ಟಿಯಾಗಿರುತ್ತದೆ. ಆರೋಗ್ಯ ಸಮಸ್ಯೆಗಳು ಕಾಡಬಹುದು. ಶುಭದಿನ: 03. ವಿಷ್ಣು ಸಹಸ್ರನಾಮ ಪಠಿಸಿರಿ.





ಉದ್ಯಮಿಗಳಿಗೆ ಉತ್ತಮ ಸಮಯ ಇದು. ಈ ಅವಧಿಯಲ್ಲಿ ಆರೋಗ್ಯವೂ ಉತ್ತಮವಾಗಿರುತ್ತದೆ. ವಾರದ ಮಧ್ಯಭಾಗದಲ್ಲಿ ಕೆಲಸ ಕಾರ್ಯಗಳು ವಿಪರೀತ ವೇಗವಾಗಿ ಪೂರ್ಣಗೊಳ್ಳುತ್ತವೆ. ಆದಾಯ ಹೆಚ್ಚು ಮಾಡಿಕೊಳ್ಳುವುದಕ್ಕೂ ಅತ್ಯುತ್ತಮವಾದ ಸಮಯ ಇದು. ಸೂಕ್ತ ಸಂಬಂಧದ ಹುಡುಕಾಟದಲ್ಲಿ ಸಾಫಲ್ಯ ಕಾಣುತ್ತೀರಿ. ಶುಭದಿನ: 30. ಲಿಂಗಾಷ್ಟಕ ಪಠಿಸಿರಿ.





ವಾರದ ಶುರುವಿನಲ್ಲಿ ನಿಮ್ಮ ಸಾಮರ್ಥ್ಯ ಹೆಚ್ಚಲಿದೆ. ಕೌಟುಂಬಿಕ ಜೀವನದಲ್ಲೂ ಅದೃಷ್ಟ ನಿಮ್ಮ ಪಾಲಿಗೆ ಇರಲಿದೆ. ಆರ್ಥಿಕ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವವರಿಗೆ ಉತ್ತಮ ಪ್ರಗತಿ ಇದೆ. ಯಶಸ್ಸು ನಿಮ್ಮ ಪಾಲಿಗೆ ಸಿಗಲಿದೆ. ಆದಾಯದಲ್ಲಿ ಹೆಚ್ಚಳವಾಗಲಿದೆ. ವಾರಾಂತ್ಯದ ಹೊತ್ತಿಗೆ ದೈಹಿಕ ತೊಂದರೆಗಳು ಇದ್ದಲ್ಲಿ ಚೇತರಿಕೆ ಕಾಣಿಸಿಕೊಳ್ಳಲಿದೆ. ಶುಭದಿನ: 01. ಚಂಡಿ ಪಾರಾಯಣ ಮಾಡಿರಿ.





ವಾರದ ಶುರುವಿನಲ್ಲಿ ಭೂಮಿ ಖರೀದಿ ಪ್ರಕ್ರಿಯೆಯಲ್ಲಿ ತೊಡಗಲಿದ್ದೀರಿ. ಭೂ ವ್ಯಾಜ್ಯಗಳು ಇದ್ದಲ್ಲಿ ಇತ್ಯರ್ಥವಾಗುತ್ತವೆ. ಸಂತೋಷ ಪಡುವುದಕ್ಕೆ ಬೇಕಾದ ಸೌಕರ್ಯಗಳನ್ನು ಪಡೆಯಲಿದ್ದೀರಿ. ವಾರದ ಮಧ್ಯ ಭಾಗದಲ್ಲಿ ಕೆಲವು ಕೆಲಸಗಳನ್ನು ಪೂರ್ಣ ಮಾಡಬೇಕಾಗುತ್ತದೆ. ಉದ್ಯೋಗಸ್ಥರಿಗೆ ಬಡ್ತಿ ದೊರೆಯುವ ಅವಕಾಶಗಳು ಹೆಚ್ಚಿವೆ. ಶುಭದಿನ: 03. ಗಣಪತಿ ಸುಬ್ರಮಣ್ಯ ಜಪ ಮಾಡಿರಿ.




ವಾರದ ಶುರುವಿನಲ್ಲಿ ಅವಕಾಶಗಳನ್ನು ಸದ್ಬಳಕೆ ಮಾಡುವ ಕಡೆಗೆ ನಿಮ್ಮ ಗಮನ ಇರುತ್ತದೆ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜತೆಗೆ ಉತ್ತಮ ಸಮಯ ಕಳೆಯಲಿದ್ದೀರಿ. ಈಗಿನ ವ್ಯವಹಾರಗಳ ವಿಸ್ತರಣೆಗೆ ಅನುಕೂಲ ಆಗಲಿದೆ. ನಿಮ್ಮ ಪ್ರಾಮಾಣಿಕ ಪ್ರಯತ್ನದಿಂದ ಯಶಸ್ಸು ಸಾಧಿಸಲಿದ್ದೀರಿ. ಶುಭದಿನ: 02. ನವದುರ್ಗಾ ಆರಾಧನೆ ಮಾಡಿರಿ.




ನೀವು ಅಂದುಕೊಂಡ ಕೆಲಸಗಳನ್ನು ಶುರು ಮಾಡುವುದಕ್ಕೆ ಸೂಕ್ತವಾದ ಸಮಯ. ನಿಮ್ಮ ವಿವೇಚನಾಶಕ್ತಿ ಅಗಾಧ ಪ್ರಮಾಣದಲ್ಲಿ ಹೆಚ್ಚಲಿದೆ. ವ್ಯಾಪಾರಕ್ಕೆ ಸಮಯ ಮೀಸಲಿಡಬೇಕಾಗುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಬಾಂಧವ್ಯ ಗಟ್ಟಿಯಾಗಲಿದೆ. ಲಾಭ ಹಾಗೂ ಆದಾಯದಲ್ಲಿ ಸ್ಥಿರತೆ ಇಲ್ಲದಂತಾಗಿ, ಚಿಂತೆಗೆ ಕಾರಣವಾಗುತ್ತದೆ. ಶುಭದಿನ: 04. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.




ವಾರದ ಶುರುವಿನಲ್ಲಿ ಉದ್ಯೋಗ ಸ್ಥಳದಲ್ಲಿ ಶ್ರಮಿಸಲಿದ್ದೀರಿ. ಶ್ರಮಕ್ಕೆ ತಕ್ಕಂತೆ ಫಲಿತಾಂಶ ದೊರೆಯಲಿದೆ. ಪ್ರೀತಿ ಪ್ರೇಮದಲ್ಲಿ ಇರುವವರಿಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಉದ್ಯಮಿಗಳು ಚಟುವಟಿಕೆಯಿಂದ ಕೆಲಸದಲ್ಲಿ ತೊಡಗುವುದರಿಂದ ಹಲವು ಬಗೆಯಲ್ಲಿ ಲಾಭ ಕಾಣಲು ಸಾಧ್ಯವಾಗಲಿದೆ. ಶುಭದಿನ: 03. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.